# ಶಾಲಾ ಪಂಚಾಂಗ

# 2026-27

## ಮಾದರಿ ನಮೂನೆ




ಇಂದ

**ANJU SAKLESHPURA**

# ಶಾಲಾ ಪಂಚಾಂಗ

# 2026-27




ಶಾಲೆ ಹೆಸರು:________________________________

ಕ್ಲಸ್ಟರ್:____________________________________

ತಾಲ್ಲೂಕು:__________________________________

ಜಿಲ್ಲೆ:______________________________________

# ಶಾಲಾ ಅವಧಿಗಳು 2026–27

**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: ಎಡಿಎಂ-2/ವಾ.ಕ್ರಿ.ಯೋ/ಅನುಷ್ಠಾನ/01/2025-26/2035272 ದಿನಾಂಕ-9.04.2026

**ಜ್ಞಾಪನ**

**ವಿಷಯ:**-ರಾಜ್ಯದಲ್ಲಿ ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶೈಕ್ಷಣಿಕ ಅವಧಿಗಳು ಮತ್ತು ರಜಾ ಅವಧಿಗಳನ್ನು ನಿಗದಿಪಡಿಸುವ ಬಗ್ಗೆ

**ಉಲ್ಲೇಖ:**-ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆDPAR/16/HHL/2024ರ ದಿನಾಂಕ-21.11.2024.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025-26ನೇ ಸಾಲಿನ ಚಟುವಟಿಕೆಗಳು ಮುಕ್ತಾಯವಾಗುತ್ತಿದ್ದು, ಮುಂದಿನ 2026-27ನೇ ಶೈಕ್ಷಣಿಕ ಸಾಲಿನ ಚಟುವಟಿಕೆಗಳನ್ನು ಪ್ರಾರಂಭಿಸಲು ಸದರಿ ಸಾಲಿನಲ್ಲಿ ಎಂದಿನಂತೆ ಅಗತ್ಯ ಪೂರ್ವಸಿದ್ಧತೆಗಾಗಿ ದಿನಾಂಕ: 29.05.2026 ರಿಂದ ಶಾಲೆ ಪ್ರಾರಂಭಿಸಲು ಸೂಚಿಸಲಾಗಿದೆ. ಅದರಂತೆ ವಾರ್ಷಿಕ ಶೈಕ್ಷಣಿಕ ಕ್ರಿಯಾಯೋಜನೆಯ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ. ಪ್ರಯುಕ್ತ ರಾಜ್ಯದ ಎಲ್ಲಾ ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಏಕರೂಪದ ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸಹಾಯವಾಗುವಂತೆ ಒಟ್ಟು ವಾರ್ಷಿಕ ದಿನಗಳಲ್ಲಿ ಲಭ್ಯವಾಗುವ ಶೈಕ್ಷಣಿಕ ಚಟುವಟಿಕೆ ಅವಧಿಗಳು, ಕರ್ತವ್ಯದ ದಿನಗಳು ಮತ್ತು ರಜಾ ದಿನಗಳನ್ನಾಧರಿಸಿ ಅದಕ್ಕನುಗುಣವಾಗಿ ವಾರ್ಷಿಕ ಕಾರ್ಯಸೂಚಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದ್ದು, ರಾಜ್ಯ ಪಠ್ಯಕ್ರಮದ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳಿಸಿ ಮತ್ತು ಅನುಪಾಲನೆ ಮಾಡಲು ತಿಳಿಸಿದೆ.

**2026-27ನೇ ಸಾಲಿನ ಶಾಲಾ ಕರ್ತವ್ಯ ದಿನಗಳು**

| | |
|---|---|
| ಮೊದಲನೇ ಅವಧಿ | ದಿನಾಂಕ:29.05.2026 ರಿಂದ ದಿನಾಂಕ-02.10.2026ರವರೆಗೆ. |
| ಎರಡನೇ ಅವಧಿ | ದಿನಾಂಕ-22.10.2026 ರಿಂದ ದಿನಾಂಕ 10.04.2027ರವರೆಗೆ . |

**ರಜಾ ದಿನಗಳು**

| | |
|---|---|
| ದಸರಾ ರಜೆ | ದಿನಾಂಕ-03.10.2026 ರಿಂದ ದಿನಾಂಕ-21.10.2026 ರವರೆಗೆ |
| ಬೇಸಿಗೆ ರಜೆ | ದಿನಾಂಕ-11.04.2027 ರಿಂದ ದಿನಾಂಕ 28.05.2027ರವರೆಗೆ . |

**2026-27ನೇ ಶೈಕ್ಷಣಿಕ ಸಾಲಿಗೆ ಶಾಲಾ ಕರ್ತವ್ಯದ ದಿನಗಳು ಮತ್ತು ರಜಾ ದಿನಗಳ ವಿವರ**

| ಕ್ರ.ಸಂ | ತಿಂಗಳು ಮತ್ತು ವರ್ಷ | ಲಭ್ಯವಿರುವ ತಿಂಗಳಿನ ಒಟ್ಟು ದಿನಗಳು | ಒಟ್ಟು ರಜಾ ದಿನಗಳು | ಲಭ್ಯವಿರುವ ಶಾಲಾ ಕರ್ತವ್ಯದ ದಿನಗಳು |
|---|---|---|---|---|
| 01 | ಮೇ-2026 | 31 | 28 | 02 |
| 02 | ಜೂನ್ -2026 | 30 | 05 | 25 |
| 03 | ಜುಲೈ-2026 | 31 | 04 | 27 |
| 04 | ಆಗಸ್ಟ್-2026 | 31 | 06 | 25 |
| 05 | ಸೆಪ್ಟಂಬರ್ 2026 | 30 | 05 | 25 |
| 06 | ಅಕ್ಟೋಬರ್ 2026 | 31 | 20 | 11 |
| 07 | ನವೆಂಬರ್ 2026 | 30 | 07 | 23 |
| 08 | ಡಿಸೆಂಬರ್ 2026 | 31 | 05 | 26 |
| 09 | ಜನವರಿ 2027 | 31 | 06 | 25 |
| 10 | ಫೆಬ್ರವರಿ 2027 | 28 | 04 | 24 |
| 11 | ಮಾರ್ಚ್ 2027 | 31 | 07 | 24 |
| 12 | ಏಪ್ರಿಲ್ 2027 | 30 | 22 | 08 |
| | | 365 | 119 | 245 |

| | | |
|---|---|---|
| 01 | 2026-27ನೇ ಶೈಕ್ಷಣಿಕ ಲಭ್ಯವಾಗುವ ಒಟ್ಟು ಶಾಲಾ ಕರ್ತವ್ಯದ ದಿನಗಳು | 245 |
| 02 | ಪರೀಕ್ಷೆಗಳು ಮತ್ತು ಮೌಲ್ಯಾಂಕನ ಕಾರ್ಯಕ್ಕಾಗಿ (FA & SA ) | 26 |
| 03 | ಪಠ್ಯೇತರ ಚಟುವಟಿಕೆಗಳ/ ಪಠ್ಯ ಚಟುವಟಿಕೆಗಳ/ ಸ್ಪರ್ಧೆಗಳ ನಿರ್ವಹಣಾ ಕಾರ್ಯಕ್ಕಾಗಿ | 24 |
| 04 | ಮೌಲ್ಯಮಾಪನಾ ಮತ್ತು ಫಲಿತಾಂಶ ವಿಶ್ಲೇಷಣೆ ಕಾರ್ಯಕ್ಕಾಗಿ | 10 |
| 05 | ಶಾಲಾ ಸ್ಥಳೀಯ ರಜೆಗಳು | 04 |
| 06 | ಬೋಧನಾ-ಕಲಿಕಾ ಪ್ರಕ್ರಿಯೆಗೆ ಉಳಿಯಬಹುದಾದ ಕರ್ತವ್ಯ ದಿನಗಳು | 181 |

**ವಿಶೇಷ ಸೂಚನೆಗಳು:**

## A. 2025-26ನೇ ಶೈಕ್ಷಣಿಕ ಸಾಲಿನ ಮುಕ್ತಾಯ ಹಂತದಲ್ಲಿ ನಿರ್ವಹಿಸಬೇಕಾದ ಅಂಶಗಳ ಕುರಿತು

1) 1 ರಿಂದ 9ನೇ ತರಗತಿವರೆಗೆ ಮೌಲ್ಯಾಂಕನ ಪರೀಕ್ಷೆಗಳ ಮೌಲ್ಯಮಾಪನವನ್ನು ಪೂರ್ಣಗೊಳಿಸಿ ಫಲಿತಾಂಶವನ್ನು ಶೇ 100 ಅಂಕಗಳಿಗೆ ಕ್ರೋಢೀಕರಿಸಿ ನಿಯಮಾನುಸಾರ ಗ್ರೇಡ್ ದಾಖಲಿಸಿ SATS ನಲ್ಲಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ದಿನಾಂಕ:07-04-2026 ರೊಳಗೆ ಹಾಗೂ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ದಿನಾಂಕ:08-04-2026ರೊಳಗೆ ಇಂದೀಕರಿಸತಕ್ಕದ್ದು.

2) 5, 8 ಮತ್ತು 9ನೇ ತರಗತಿಯ SA-2 ಮೌಲ್ಯಾಂಕನ ಸೇರಿದಂತೆ ಉಳಿದ 1 ರಿಂದ 9 ನೇ ತರಗತಿಗಳ ಫಲಿತಾಂಶವನ್ನು ನಿಯಮಾನುಸಾರ ವಿಶ್ಲೇಷಿಸಿ, ನಿಗದಿಪಡಿಸಿದಂತೆ ದಿನಾಂಕ 09.04.2026 ರಂದು ಪ್ರಾಥಮಿಕ ಶಾಲಾ ಹಂತದಲ್ಲಿ ಹಾಗೂ ದಿನಾಂಕ 10.04.2026 ರಂದು ಪ್ರೌಢಶಾಲಾ ಹಂತದಲ್ಲಿ ಎರಡನೇ ಸಮುದಾಯ ದತ್ತ ಶಾಲೆ/ಪೋಷಕರ ಸಭೆ ಕರೆದು ಪ್ರಕಟಣೆ ಮಾಡಲು ಈಗಾಗಲೇ ದಿನಾಂಕ : 4.4.2026 ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ.

3) ದಿನಾಂಕ:14-04-2026 ರಂದು ಡಾ|| ಬಿ.ಆರ್ ಅಂಬೇಡ್ಕರ್ ರವರ ಜಯಂತಿಯನ್ನು ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಹಾಗೂ ಎಸ್.ಡಿ.ಎಂ.ಸಿ/ಖಾಸಗಿ ಶಾಲೆಗಳಲ್ಲಿ ಸಂಬಂಧಿಸಿದ ಆಡಳಿತ ಮಂಡಳಿಯವರು ಮತ್ತು ಮಕ್ಕಳೊಂದಿಗೆ ಉತ್ತಮ ಪೂರ್ವ ತಯಾರಿಯೊಂದಿಗೆ ಆಚರಿಸತಕ್ಕದ್ದು.

4) ಶಾಲಾ ಸ್ಥಳೀಯ ರಜೆಗಳಿಗೆ ಸಂಬಂಧಿಸಿದಂತೆ ಶಾಲಾವಾರು ನಿರ್ದಿಷ್ಟಪಡಿಸಿದ ದಿನಾಂಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪೂರ್ವಭಾವಿಯಾಗಿ ಜೂನ್-2026 ರ ಮೊದಲನೇ ವಾರದಲ್ಲಿ ಅನುಮೋದನೆ ನೀಡುವುದು. ಅನುಮೋದಿಸಿದ ದಿನಾಂಕಗಳಿಗೆ ಮಾತ್ರ ಸ್ಥಳೀಯ ರಜೆ ಹೊಂದುವುದು.

5) 2026-27 ನೇ ಸಾಲಿಗೆ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೆ 02 ಜೊತೆ ಉಚಿತ ಸಮವಸ್ತ್ರ ಮತ್ತು ಪಠ್ಯಪುಸ್ತಕ ಹಾಗೂ ಖಾಸಗಿ ಶಾಲೆಗಳಿಗೆ ಪಠ್ಯಪುಸ್ತಕಗಳು ಸಂಬಂಧಿಸಿದ ತಾಲ್ಲೂಕುಗಳಿಗೆ ಸರಬರಾಜು ಆದ ತಕ್ಷಣ ಸಂಬಂಧಿಸಿದ ಶಾಲೆಗಳ ಮುಖ್ಯೋಪಾಧ್ಯಾಯರ ಮುಖಾಂತರ ಮಕ್ಕಳಿಗೆ ತಲುಪಿಸುವ ಕುರಿತು ಕ್ರಮವಹಿಸುವುದು.

6) ದಿನಾಂಕ:11-04-2026 ರಿಂದ ದಿನಾಂಕ:28-05-2026 ರವರೆಗೆ ಶಾಲೆಗಳಿಗೆ ಬೇಸಿಗೆ ರಜೆ ಘೋಷಣೆಯಾಗಿರುವುದರಿಂದ ಶಾಲಾ ಮುಖ್ಯಸ್ಥರು ಶಾಲಾ ದಾಸ್ತಾನು ಮತ್ತು ದಾಖಲೆಗಳನ್ನು ಹಾಗೂ ಅಕ್ಷರ ದಾಸೋಹ ಕಾರ್ಯಕ್ರಮದಡಿ ಮಧ್ಯಾಹ್ನದ ಬಿಸಿಯೂಟದ ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡುವುದು ಹಾಗೂ ಬರಪೀಡಿತ ತಾಲ್ಲೂಕುಗಳಲ್ಲಿ ರಜಾ ಅವಧಿಯಲ್ಲಿ ಮಕ್ಕಳಿಗೆ ಬಿಸಿ ಊಟ ನೀಡುವ ಕುರಿತು ಸಂಬಂಧಿಸಿದ ನಿರ್ದೇಶನಾಲಯದಿಂದ ನೀಡುವ ಸೂಚನೆಗಳಂತೆ ಕ್ರಮವಹಿಸುವುದು. ಒಂದು ವೇಳೆ ಈ ಅವಧಿಯಲ್ಲಿ ಅಧಿಕೃತ ಚುನಾವಣಾ ಕಾರ್ಯಕ್ಕೆ ಮತಗಟ್ಟೆ ಕೇಂದ್ರಗಳನ್ನಾಗಿ ಶಾಲೆಗಳನ್ನು ಬಳಸಲು ಸಂಬಂಧಿಸಿದ ಪ್ರಾಧಿಕಾರ ಕೋರಿದ್ದಲ್ಲಿ ಸಹಕರಿಸಲು ಸೂಚಿಸಿದೆ.

### B. 2026-27ನೇ ಶೈಕ್ಷಣಿಕ ಸಾಲಿನಲ್ಲಿ ನಿರ್ವಹಿಸಬೇಕಾದ ಅಂಶಗಳ ಕುರಿತು

1. ದಿನಾಂಕ:29-05-2026ರಿಂದ ಶಾಲೆಗಳು ಪ್ರಾರಂಭವಾಗಲಿದ್ದು, ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಸದರಿ ದಿನದಂದು ಶಾಲೆಗಳಿಗೆ ಹಾಜರಾಗಿ ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ವಿದ್ಯಾರ್ಥಿಗಳ ಶಾಲಾ ಪ್ರವೇಶಾತಿಯನ್ನು/ದಾಖಲಾತಿಯನ್ನು ದಿನಾಂಕ:30.05.2026 ರಿಂದ ಪ್ರಾರಂಭೋತ್ಸವದೊಂದಿಗೆ ಆರಂಭಿಸಿ, ದಿನಾಂಕ: 30.06.2026ರಂದು ಮುಕ್ತಾಯಗೊಳಿಸತಕ್ಕದ್ದು

ಈ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷ ನವೆಂಬರ್-2025 ರಿಂದ ವಿವಿಧ ಕಾರಣಗಳಿಂದ ಶಾಲೆ /ಕಾಲೇಜು ಬಿಟ್ಟ 6 ರಿಂದ 18 ವಯೋಮಾನದ ಮಕ್ಕಳನ್ನು ಪುನ: ಶಾಲೆ /ಕಾಲೇಜಿಗೆ ಕರೆ ತರಲು ಹಾಗೂ 2026-27ನೇ ಸಾಲಿನ ದಾಖಲಾತಿ ಸಂಬಂಧಿಸಿದಂತೆ ಜನವಸತಿ ಪ್ರದೇಶದ ಅರ್ಹ ವಯೋಮಾನದ ಮಕ್ಕಳನ್ನು ಗುರುತಿಸಿ ದಾಖಲಿಸಲು "ದಾಖಲಾತಿ ಜಾಗೃತಿ ಅಭಿಯಾನ" ಕಾರ್ಯಕ್ರಮವನ್ನು ಮಾನ್ಯ ಸಚಿವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಸದರಿ ಅಭಿಯಾನವು ನವೆಂಬರ್-2025 ರಿಂದ ಜೂನ್ 2026ರವರೆಗೂ ಲ್ಲಿರುತ್ತದೆ.

ದಿನಾಂಕ-14.11.2025 ರಿಂದ 30.06.2026 ವಯೋಮಾನದ ಅರ್ಹ ಮಕ್ಕಳ ದಾಖಲಾತಿ ಜಾಗೃತಿ ಅಭಿಯಾನದಲ್ಲಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳನ್ನು (**ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 98 ಎಂಪಿಇ 2025, ದಿನಾಂಕ-13.11.2025ರಲ್ಲಿ**) ನಿರ್ದೇಶಿಸಿರುವಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ದಾಖಲಾತಿ ಆಂದೋಲನವನ್ನು ಅರ್ಥಪೂರ್ಣಗೊಳಿಸುವಂತೆ ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆಯವರಿಗೆ ಸೂಚಿಸಿದೆ.

2. ಕೆಲವು ಮಕ್ಕಳು ನಿರಂತರವಾಗಿ ಶಾಲೆಗೆ ಗೈರುಹಾಜರಾಗುತ್ತಿರುವುದು ಮತ್ತು ಶಾಲೆಯನ್ನು ಅರ್ಧದಲ್ಲಿಯೇ ಬಿಡುವ ಮಕ್ಕಳನ್ನು ಕಡ್ಡಾಯವಾಗಿ ಹಾಜರಾತಿ ಅಧಿಕಾರಿಯು (ಶಿಕ್ಷಣ ಸಂಯೋಜಕರು) CRP & BRP ಗಳೊಂದಿಗೆ ಸಂಪರ್ಕದಲ್ಲಿದ್ದು ದಾಖಲಾತಿ ಆಂದೋಲನದ ಮುಖಾಂತರ ವ್ಯಾಪಕ ಪ್ರಚಾರ ಕೈಗೊಂಡು ಶಾಲಾ ಮುಖ್ಯವಾಹಿನಿಗೆ ತರುವುದು.

3. ಕ್ರಿಸ್‌ಮಸ್ ರಜೆ ಬೇಡಿಕೆಯನ್ನು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸಿದಲ್ಲಿ ಈ ಬಗ್ಗೆ ಆಯಾ ಉಪನಿರ್ದೇಶಕರು (ಆಡಳಿತ) ರವರು ಈ ಕುರಿತು ಪರಿಶೀಲಿಸಿ ನಿರ್ಧರಿಸುವುದು ಸದರಿ ಡಿಸೆಂಬರ್ ಮಾಹೆಯಲ್ಲಿ ನೀಡುವ ಕ್ರಿಸ್ ಮಸ್ ರಜಾ ಅವಧಿಯನ್ನು ಅಕ್ಟೋಬರ್ ಮಾಹೆಯ ಮಧ್ಯಂತರ ರಜೆಯಲ್ಲಿ ಕಡಿತಗೊಳಿಸಿ ಸರಿದೂಗಿಸಿಕೊಳ್ಳಲು ಕ್ರಮವಹಿಸತಕ್ಕದ್ದು.

4. ರಾಜ್ಯ/ಜಿಲ್ಲಾ ಕಛೇರಿಗಳಿಂದ ನಿಯೋಜಿಸಿದ ಜಿಲ್ಲಾ ಮತ್ತು ತಾಲ್ಲೂಕು ಶೈಕ್ಷಣಿಕ ಉಸ್ತುವಾರಿ ನೋಡಲ್ ಅಧಿಕಾರಿಗಳು, ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ರವರುಗಳು, ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಕ್ಲಸ್ಟರ್ ಹಂತದಲ್ಲಿ ಸಿ.ಆರ್.ಪಿಗಳು, ತಮ್ಮ ತಮ್ಮ ವ್ಯಾಪ್ತಿಗನುಗುಣವಾಗಿ ಕ್ರಿಯಾಶೀಲ ಮೇಲ್ವಿಚಾರಣೆ ಮತ್ತು ಶೈಕ್ಷಣಿಕ ಉಸ್ತುವಾರಿ ಕ್ರಿಯಾ ಯೋಜನೆಯನ್ನು ಈ ಮುಂದೆ ನೀಡಲಾಗುವ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ತಿಳಿಸುವಂತೆ ತಯಾರಿಸಿಕೊಂಡು ಶಾಲೆಗಳ ಪ್ರಾರಂಭಕ್ಕೆ ಪೂರ್ವ ತಯಾರಿ ಮಾಡಿಕೊಳ್ಳುವುದು, ಶಾಲೆಗಳ ಪ್ರಾರಂಭದ ಸಮಯದಲ್ಲಿ ಇರುವ ಇಲಾಖಾ ಪ್ರೋತ್ಸಾಹದಾಯಕ ಯೋಜನೆಗಳಾದ PM ಪೋಷಣ್, ಕ್ಷೀರ ಭಾಗ್ಯ ಹಾಗೂ ಪೂರೈಸಲಾಗುವ ಸಮವಸ್ತ್ರ, ಪಠ್ಯಪುಸ್ತಕ ವಿತರಣೆಗೆ ಕ್ರಮವಹಿಸುವುದು. ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಅಭಿವೃದ್ಧಿ ಪಡಿಸಲು **ಮಿಂಚಿನ ಸಂಚಾರ** ಕೈಗೊಂಡು ಉಸ್ತುವಾರಿ ಮಾಡುವುದು.

5.ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಹಾಗೂ ನಾಡ ಹಬ್ಬವಾದ ಕರ್ನಾಟಕ ರಾಜ್ಯೋತ್ಸವ ಮತ್ತು ಇತರೆ ಪ್ರಮುಖ ಜಯಂತಿಗಳನ್ನು ಕಡ್ಡಾಯವಾಗಿ ಆಯಾ ದಿನಗಳಂದು ಗೌರವಪೂರ್ವಕವಾಗಿ ಆಚರಿಸತಕ್ಕದ್ದು.

6. ನಿಗಧಿಪಡಿಸಿದ ಶೈಕ್ಷಣಿಕ ಕರ್ತವ್ಯದ ಅವಧಿಗಳು ಕಡಿಮೆಯಾಗದಂತೆ ಮುಷ್ಕರ ಮಳೆಗಾಗಿ, ಇನ್ನಿತರೆ ಅನಿರೀಕ್ಷಿತ ಕಾರಣಗಳಿಂದಾಗಿ ಶಾಲೆಗೆ ರಜೆ ಘೋಷಣೆಯಾದಲ್ಲಿ ಆ ಅವಧಿಯ ಶಾಲಾ ಕರ್ತವ್ಯದ ದಿನಗಳನ್ನು ಮುಂದಿನ ರಜಾ ದಿನಗಳಲ್ಲಿ ಪೂರ್ಣದಿನದ ಶಾಲೆಗಳನ್ನು ನಡೆಸಿ, ಶಾಲಾ ಕರ್ತವ್ಯದ ದಿನಗಳನ್ನು ಸರಿದೂಗಿಸಿಕೊಳ್ಳಲು ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.

7. ಪರೀಕ್ಷಾ ದಿನಗಳು, ಮೌಲ್ಯಾಂಕನ ದಿನಗಳು, ಹಾಗೂ ಪೂರಕ ಶೈಕ್ಷಣಿಕ ಚಟುವಟಿಕೆ ನಡೆಸುವ ದಿನಗಳನ್ನು ಕೂಡ ಶಾಲಾ ಕರ್ತವ್ಯದ ದಿನವೆಂದು ನಿಗದಿತ ಅವಧಿಗಳಲ್ಲಿ ಪರಿಗಣಿಸುವುದು.

8. 2026-27 ನೇ ಸಾಲಿನ ವಾರ್ಷಿಕ ಶೈಕ್ಷಣಿಕ ಮಾರ್ಗಸೂಚಿಯನ್ನು ಸಿದ್ಧಪಡಿಸಿ ನಂತರ ಪೂರೈಸಲಾಗುವುದು. ಅದರಂತೆ ಶಾಲಾ/ಕ್ಲಸ್ಟರ್/ತಾಲ್ಲೂಕು ಹಾಗೂ ಜಿಲ್ಲಾ ಹಂತಗಳಲ್ಲಿ ಕ್ರಿಯಾ ಯೋಜನೆ ರೂಪಿಸಿಕೊಂಡು ಅನುಪಾಲನೆ ಮಾಡತಕ್ಕದ್ದು.

ವಿಶೇಷ ಸೂಚನೆ:- ಕಾಲಕಾಲಕ್ಕೆ ಸರ್ಕಾರದಿಂದ ನೀಡುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದೆ.

Digitally signed by
VIKAS KISHOR SURALKAR
Date: 10-04-2026
19:27:23 ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ರಾಜ್ಯ ಪಠ್ಯಕ್ರಮದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಸ್ಥರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಅಗತ್ಯ ಕ್ರಮಕ್ಕಾಗಿ.

# ಶಾಲಾ ಪಂಚಾಂಗ 2026-27

| ದಿನಾಂಕ/ ತಿಂಗಳು | ಮೇ-2026 | ಜೂನ್-2026 | ಜುಲೈ-2026 |
|---|---|---|---|
| 1 | ಬೇಸಿಗೆ ರಜಾ ಅವಧಿ | ಸೇತುಬಂಧ ಶಿಕ್ಷಣ ಆರಂಭ | ಶೇ 15 ಪಠ್ಯವಸ್ತು ಬೋಧನೆ |
| 2 | | ಶಾಲಾ ದಾಖಲಾತಿ ಆಂದೋಲನ | ಶೇ 15 ಪಠ್ಯವಸ್ತು ಬೋಧನೆ |
| 3 | | ಶಾಲಾ ದಾಖಲಾತಿ ಆಂದೋಲನ | ಶೇ 15 ಪಠ್ಯವಸ್ತು ಬೋಧನೆ |
| 4 | | ಶಾಲಾ ದಾಖಲಾತಿ ಆಂದೋಲನ | ಮಕ್ಕಳ ಆಪ್ತಸಮಾಲೋಚನೆ |
| 5 | | ಪುಸ್ತಕ ಪರಿಚಯ ಅವಧಿ | ಭಾನುವಾರ |
| 6 | | ಸೇತುಬಂಧ ಶಿಕ್ಷಣ | ಮಕ್ಕಳ ಆಪ್ತಸಮಾಲೋಚನೆ |
| 7 | | ಭಾನುವಾರ | ಮಕ್ಕಳ ಆಪ್ತಸಮಾಲೋಚನೆ |
| 8 | | ಸೇತುಬಂಧ ಶಿಕ್ಷಣ | ಮಕ್ಕಳ ಆಪ್ತಸಮಾಲೋಚನೆ |
| 9 | | ವಿವಿಧ ಕ್ಲಬ್‌ಗಳ ರಚನೆ | ಶೇ 15 ಪಠ್ಯವಸ್ತು ಬೋಧನೆ |
| 10 | | ಸೇತುಬಂಧ ಶಿಕ್ಷಣ | ಶೇ 15 ಪಠ್ಯವಸ್ತು ಬೋಧನೆ |
| 11 | | ಸೇತುಬಂಧ ಶಿಕ್ಷಣ | ಹೋಬಳಿ ಮಟ್ಟದ ಕ್ರೀಡಾಕೂಟ |
| 12 | | ಸೇತುಬಂಧ ಶಿಕ್ಷಣ | ಭಾನುವಾರ |
| 13 | | ಸೇತುಬಂಧ ಶಿಕ್ಷಣ | ಹೋಬಳಿ ಮಟ್ಟದ ಕ್ರೀಡಾಕೂಟ |
| 14 | | ಭಾನುವಾರ | ಹೋಬಳಿ ಮಟ್ಟದ ಕ್ರೀಡಾಕೂಟ |
| 15 | | ವಿದ್ಯಾರ್ಥಿ ಕಲಿಕಾ ಪ್ರಗತಿ ಆಧರಿಸಿ ಶ್ರೇಣಿ | ಅನುಭವ ಹಂಚಿಕೆ ಕಾರ್ಯಾಗಾರ |
| 16 | | ವಿದ್ಯಾರ್ಥಿ ಕಲಿಕಾ ಪ್ರಗತಿ ಆಧರಿಸಿ ಶ್ರೇಣಿ | ಅನುಭವ ಹಂಚಿಕೆ ಕಾರ್ಯಾಗಾರ |
| 17 | | ಶೇ 10 ಪಠ್ಯವಸ್ತು ಬೋಧನೆ | ಅನುಭವ ಹಂಚಿಕೆ ಕಾರ್ಯಾಗಾರ |
| 18 | | ಶೇ 10 ಪಠ್ಯವಸ್ತು ಬೋಧನೆ | ರೂಪಣಾತ್ಮಕ ಮೌಲ್ಯಮಾಪನ-1 |
| 19 | | ಶೇ 10 ಪಠ್ಯವಸ್ತು ಬೋಧನೆ | ಭಾನುವಾರ |
| 20 | | ಶೇ 10 ಪಠ್ಯವಸ್ತು ಬೋಧನೆ | ಶೇ 15 ಪಠ್ಯವಸ್ತು ಬೋಧನೆ |
| 21 | | ಭಾನುವಾರ | ಶೇ 15 ಪಠ್ಯವಸ್ತು ಬೋಧನೆ |
| 22 | | ಶೇ 10 ಪಠ್ಯವಸ್ತು ಬೋಧನೆ | ಶೇ 15 ಪಠ್ಯವಸ್ತು ಬೋಧನೆ |
| 23 | | ಶೇ 10 ಪಠ್ಯವಸ್ತು ಬೋಧನೆ | ಶೇ 15 ಪಠ್ಯವಸ್ತು ಬೋಧನೆ |
| 24 | | ಶೇ 10 ಪಠ್ಯವಸ್ತು ಬೋಧನೆ | ಶೇ 15 ಪಠ್ಯವಸ್ತು ಬೋಧನೆ |
| 25 | | ವಿದ್ಯಾರ್ಥಿ ಕಲಿಕಾ ಪ್ರಗತಿ ಆಧರಿಸಿ ಶ್ರೇಣಿ | ಶೇ 15 ಪಠ್ಯವಸ್ತು ಬೋಧನೆ |
| 26 | | ಮೊಹರಂ ಕಡೇದಿನ/ಭಾನುವಾರ | ಭಾನುವಾರ |
| 27 | | ವಿದ್ಯಾರ್ಥಿ ಕಲಿಕಾ ಪ್ರಗತಿ ಆಧರಿಸಿ ಶ್ರೇಣಿ | ಪೋಷಕರ/ ತಾಯಂದಿರ ಸಭೆ |
| 28 | | ಭಾನುವಾರ | ಶೇ 15 ಪಠ್ಯವಸ್ತು ಬೋಧನೆ |
| 29 | ಶಾಲಾ ಪೂರ್ವ ಸಿದ್ದತೆ | ಸಿ.ಸಿ.ಇ ಚಟುವಟಿಕೆ-1 ನಿರ್ವಹಣೆ | ಸಿ.ಸಿ.ಇ ಚಟುವಟಿಕೆ-2 ನಿರ್ವಹಣೆ |
| 30 | ಶಾಲೆ ಪ್ರಾರಂಭೋತ್ಸವ | ಸಿ.ಸಿ.ಇ ಚಟುವಟಿಕೆ-1 ನಿರ್ವಹಣೆ | ಸಿ.ಸಿ.ಇ ಚಟುವಟಿಕೆ-2 ನಿರ್ವಹಣೆ |
| 31 | ಭಾನುವಾರ | ------ | ಸಿ.ಸಿ.ಇ ಚಟುವಟಿಕೆ-2 ನಿರ್ವಹಣೆ |

# ಶಾಲಾ ಪಂಚಾಂಗ 2026–27

| ದಿನಾಂಕ/ ತಿಂಗಳು | ಆಗಸ್ಟ್–2026 | ಸೆಪ್ಟಂಬರ್–2026 | ಅಕ್ಟೋಬರ್–2026 |
|---|---|---|---|
| 1 | ಶೇ 15 ಪಠ್ಯವಸ್ತು ಬೋಧನೆ | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ ಕಾರ್ಯ |
| 2 | ಭಾನುವಾರ | ಶೇ 15 ಪಠ್ಯವಸ್ತು ಬೋಧನೆ | ಗಾಂಧೀ ಜಯಂತಿ |
| 3 | ಶೇ 15 ಪಠ್ಯವಸ್ತು ಬೋಧನೆ | ಸಿ.ಸಿ.ಇ ಚಟುವಟಿಕೆ–4 ನಿರ್ವಹಣೆ | ದಸರಾ ರಜೆ |
| 4 | ಶೇ 15 ಪಠ್ಯವಸ್ತು ಬೋಧನೆ | ಶ್ರೀಕೃಷ್ಣ ಜನ್ಮಾಷ್ಟಮಿ | ಭಾನುವಾರ |
| 5 | ಶೇ 15 ಪಠ್ಯವಸ್ತು ಬೋಧನೆ | ಶಿಕ್ಷಕರ ದಿನಾಚರಣೆ | ದಸರಾ ರಜೆ |
| 6 | ಶೇ 15 ಪಠ್ಯವಸ್ತು ಬೋಧನೆ | ಭಾನುವಾರ | ದಸರಾ ರಜೆ |
| 7 | ಶೇ 15 ಪಠ್ಯವಸ್ತು ಬೋಧನೆ | ರೂಪಣಾತ್ಮಕ ಮೌಲ್ಯಮಾಪನ–2 | ದಸರಾ ರಜೆ |
| 8 | ಶೇ 15 ಪಠ್ಯವಸ್ತು ಬೋಧನೆ | ಅ.ಸಾಕ್ಷರತಾ ದಿನಾಚರಣೆ | ದಸರಾ ರಜೆ |
| 9 | ಭಾನುವಾರ | ಸಂಕಲನಾತ್ಮಕ ಮೌಲ್ಯಮಾಪನ–1 | ದಸರಾ ರಜೆ |
| 10 | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ–1 | ದಸರಾ ರಜೆ |
| 11 | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ–1 | ಭಾನುವಾರ |
| 12 | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ–1 | ದಸರಾ ರಜೆ |
| 13 | ಶೇ 15 ಪಠ್ಯವಸ್ತು ಬೋಧನೆ | ಸ್ವರ್ಣಗೌರಿ ವ್ರತ/ಭಾನುವಾರ | ದಸರಾ ರಜೆ |
| 14 | ಶೇ 15 ಪಠ್ಯವಸ್ತು ಬೋಧನೆ | ಗಣೇಶ ಚತುರ್ಥಿ | ದಸರಾ ರಜೆ |
| 15 | ಸ್ವಾತಂತ್ರ್ಯ ದಿನಾಚರಣೆ | ಸರ್.ಎಮ್.ವಿ ದಿನಾಚರಣೆ | ದಸರಾ ರಜೆ |
| 16 | ಭಾನುವಾರ | ಸಂಕಲನಾತ್ಮಕ ಮೌಲ್ಯಮಾಪನ–1 | ದಸರಾ ರಜೆ |
| 17 | ಶೇ 15 ಪಠ್ಯವಸ್ತು ಬೋಧನೆ | ವಿಶ್ವಕರ್ಮ ಜಯಂತಿ | ದಸರಾ ರಜೆ |
| 18 | ಶೇ 15 ಪಠ್ಯವಸ್ತು ಬೋಧನೆ | ಶೇ 15 ಪಠ್ಯವಸ್ತು ಬೋಧನೆ | ಭಾನುವಾರ |
| 19 | ತಾಲ್ಲೂಕು ಮಟ್ಟದ ಕ್ರೀಡಾಕೂಟ | ಶೇ 15 ಪಠ್ಯವಸ್ತು ಬೋಧನೆ | ದಸರಾ ರಜೆ |
| 20 | ತಾಲ್ಲೂಕು ಮಟ್ಟದ ಕ್ರೀಡಾಕೂಟ | ಭಾನುವಾರ | ಮಹಾನವಮಿ/ಆಯುಧಪೂಜೆ |
| 21 | ವರಮಹಾಲಕ್ಷ್ಮಿ ವ್ರತ | ಶೇ 15 ಪಠ್ಯವಸ್ತು ಬೋಧನೆ | ವಿಜಯದಶಮಿ |
| 22 | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ–1 | ಶಾಲೆ ಪ್ರಾರಂಭೋತ್ಸವ |
| 23 | ಭಾನುವಾರ | ಸಂಕಲನಾತ್ಮಕ ಮೌಲ್ಯಮಾಪನ–1 | ಶೇ 15/20 ಪಠ್ಯವಸ್ತು ಬೋಧನೆ |
| 24 | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ–1 | ಶೇ 15/20 ಪಠ್ಯವಸ್ತು ಬೋಧನೆ |
| 25 | ಶೇ 15 ಪಠ್ಯವಸ್ತು ಬೋಧನೆ | ಸಂಕಲನಾತ್ಮಕ ಮೌಲ್ಯಮಾಪನ–1 | ಭಾನುವಾರ |
| 26 | ಈದ್ ಮಿಲಾದ್ | ಸಂಕಲನಾತ್ಮಕ ಮೌಲ್ಯಮಾಪನ–1 | ಶೇ 15/20 ಪಠ್ಯವಸ್ತು ಬೋಧನೆ |
| 27 | ಯಜುರ್ ಉಪಕರ್ಮ | ಭಾನುವಾರ | ಶೇ 15/20 ಪಠ್ಯವಸ್ತು ಬೋಧನೆ |
| 28 | ನಾರಾಯಣ ಗುರು ಜಯಂತಿ | ಸಂಕಲನಾತ್ಮಕ ಮೌಲ್ಯಮಾಪನ–1 | ಶೇ 15/20 ಪಠ್ಯವಸ್ತು ಬೋಧನೆ |
| 29 | ರಾಷ್ಟ್ರೀಯ ಕ್ರೀಡಾದಿನ | ಸಂಕಲನಾತ್ಮಕ ಮೌಲ್ಯಮಾಪನ–1 | ಶೇ 15/20 ಪಠ್ಯವಸ್ತು ಬೋಧನೆ |
| 30 | ಭಾನುವಾರ | ಸಂಕಲನಾತ್ಮಕ ಮೌಲ್ಯಮಾಪನ–1 | ಶೇ 15/20 ಪಠ್ಯವಸ್ತು ಬೋಧನೆ |
| 31 | ಸಿ.ಸಿ.ಇ ಚಟುವಟಿಕೆ–3 ನಿರ್ವಹಣೆ | ------ | ಶೇ 15/20 ಪಠ್ಯವಸ್ತು ಬೋಧನೆ |

# ಶಾಲಾ ಪಂಚಾಂಗ 2026–27

| ದಿನಾಂಕ/ ತಿಂಗಳು | ನವಂಬರ್–2026 | ಡಿಸಂಬರ್–2026 | ಜನವರಿ–2027 |
|---|---|---|---|
| 1 | ಕನ್ನಡ ರಾಜ್ಯೋತ್ಸವ ಆಚರಣೆ | ವಿಶ್ವ ಏಡ್ಸ್ ದಿನಾಚರಣೆ | ಶೇ 10/15 ಪಠ್ಯವಸ್ತು ಬೊಧನೆ |
| 2 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 3 | ಶೇ 15/20 ಪಠ್ಯವಸ್ತು ಬೊಧನೆ | ವಿಕಲಚೇತನರ ದಿನ | ಭಾನುವಾರ/ಸಾವಿತ್ರಿ ಬಾಯಿ ಫುಲೆ ಜಯಂತಿ |
| 4 | ಕ್ಲಸ್ಟರ್ ಪ್ರತಿಭಾ ಕಾರಂಜಿ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 5 | ಗುರುನಾನಕ್ ಜಯಂತಿ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 6 | ಶೇ 15/20 ಪಠ್ಯವಸ್ತು ಬೊಧನೆ | ಭಾನುವಾರ | ಅನುಭವ ಹಂಚಿಕೆ ಕಾರ್ಯಗಾರ |
| 7 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಅನುಭವ ಹಂಚಿಕೆ ಕಾರ್ಯಗಾರ |
| 8 | ಭಾನುವಾರ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 9 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 10 | ಬಲಿಪಾಡ್ಯಮಿ/ದೀಪಾವಳಿ | ಶೇ 15/20 ಪಠ್ಯವಸ್ತು ಬೊಧನೆ | ಭಾನುವಾರ |
| 11 | ರಾಷ್ಟ್ರೀಯ ಶಿಕ್ಷಣ ದಿನ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 12 | ರಾಜ್ಯ ಮಟ್ಟದ ಕ್ರೀಡಾಕೂಟ | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ | ಸ್ವಾಮಿ ವಿವೇಕಾನಂದ ಜಯಂತಿ |
| 13 | ಶೇ 15/20 ಪಠ್ಯವಸ್ತು ಬೊಧನೆ | ಭಾನುವಾರ | ಶೇ 10/15 ಪಠ್ಯವಸ್ತು ಬೊಧನೆ |
| 14 | ಮಕ್ಕಳ ದಿನಾಚರಣೆ | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ | ಶೇ 10/15 ಪಠ್ಯವಸ್ತು ಬೊಧನೆ |
| 15 | ಭಾನುವಾರ | ಶೇ 15/20 ಪಠ್ಯವಸ್ತು ಬೊಧನೆ | ಮಕರ ಸಂಕ್ರಾಂತಿ |
| 16 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 17 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಭಾನುವಾರ |
| 18 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 19 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 20 | ರಾಷ್ಟ್ರೀಯ ಭಾವೈಕ್ಯತಾ ಕಾರ್ಯಕ್ರಮ | ಭಾನುವಾರ | 10ನೇ ವಿದ್ಯಾರ್ಥಿಗಳಿಗೆ ಸರಣಿ ಪರೀಕ್ಷೆ |
| 21 | ಶೇ 15/20 ಪಠ್ಯವಸ್ತು ಬೊಧನೆ | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ | 10ನೇ ವಿದ್ಯಾರ್ಥಿಗಳಿಗೆ ಸರಣಿ ಪರೀಕ್ಷೆ |
| 22 | ಭಾನುವಾರ | ರಾಷ್ಟ್ರೀಯ ಗಣಿತ ದಿನ | 10ನೇ ವಿದ್ಯಾರ್ಥಿಗಳಿಗೆ ಸರಣಿ ಪರೀಕ್ಷೆ |
| 23 | ಶೇ 15/20 ಪಠ್ಯವಸ್ತು ಬೊಧನೆ | ಶೇ 15/20 ಪಠ್ಯವಸ್ತು ಬೊಧನೆ | ಶೇ 10/15 ಪಠ್ಯವಸ್ತು ಬೊಧನೆ |
| 24 | ಗುರುನಾನಕ್ ಜಯಂತಿ | ಶೇ 15/20 ಪಠ್ಯವಸ್ತು ಬೊಧನೆ | ಭಾನುವಾರ |
| 25 | ಶೇ 15/20 ಪಠ್ಯವಸ್ತು ಬೊಧನೆ | ಕ್ರಿಸ್ ಮಸ್ | ರಾಷ್ಟ್ರೀಯ ಮತದಾರರ ದಿನ |
| 26 | ಸಂವಿಧಾನ ದಿನ | ಅಣಕು ಸಂಸತ್ತು ಸ್ಪರ್ಧೆ ಸಿ.ಸಿ.ಇ | ಗಣರಾಜ್ಯ ದಿನಾಚರಣೆ |
| 27 | ಕನಕದಾಸ ಜಯಂತಿ | ಭಾನುವಾರ | ಶೇ 10/15 ಪಠ್ಯವಸ್ತು ಬೊಧನೆ |
| 28 | ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ | ರೂಪಣಾತ್ಮಕ ಮೌಲ್ಯಮಾಪನ–3 | ಶೇ 10/15 ಪಠ್ಯವಸ್ತು ಬೊಧನೆ |
| 29 | ಭಾನುವಾರ | ರೂಪಣಾತ್ಮಕ ಮೌಲ್ಯಮಾಪನ–3 | ಸಿ.ಸಿ.ಇ ಚಟುವಟಿಕೆ–7 ನಿರ್ವಹಣೆ |
| 30 | ಸಿ.ಸಿ.ಇ ಚಟುವಟಿಕೆ–5 ನಿರ್ವಹಣೆ | ಸಿ.ಸಿ.ಇ ಚಟುವಟಿಕೆ–6 ನಿರ್ವಹಣೆ | ಹುತಾತ್ಮರ ದಿನಾಚರಣೆ/ಪೋಷಕರ ಸಭೆ |
| 31 | ----- | ಸಿ.ಸಿ.ಇ ಚಟುವಟಿಕೆ–6 ನಿರ್ವಹಣೆ | ಭಾನುವಾರ |

# ಶಾಲಾ ಪಂಚಾಂಗ 2026–27

| ದಿನಾಂಕ/ ತಿಂಗಳು | ಫೆಬ್ರವರಿ–2027 | ಮಾರ್ಚ್–2027 | ಏಪ್ರಿಲ್–2027 | ಮೇ–2027 |
|---|---|---|---|---|
| 1 | ಪುನರಾವರ್ತನೆ | ಪುನರಾವರ್ತನೆ | ಸಮಗ್ರಸಂಕಲನಾತ್ಮಕ ಮೌಲ್ಯಮಾಪನ | ಬೇಸಿಗೆ ರಜೆ |
| 2 | ಪುನರಾವರ್ತನೆ | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪ್ರಿಪರೇಟರಿ ಪರೀಕ್ಷೆಗಳು | ಸಮಗ್ರಸಂಕಲನಾತ್ಮಕ ಮೌಲ್ಯಮಾಪನ | |
| 3 | ಪುನರಾವರ್ತನೆ | ಪುನರಾವರ್ತನೆ | ಸಮಗ್ರಸಂಕಲನಾತ್ಮಕ ಮೌಲ್ಯಮಾಪನ | |
| 4 | ಪುನರಾವರ್ತನೆ | ಪುನರಾವರ್ತನೆ | ಭಾನುವಾರ | |
| 5 | ಪುನರಾವರ್ತನೆ | ಪುನರಾವರ್ತನೆ | ಸ.ಸ. ಮೌಲ್ಯಮಾಪನ ಕ್ರೋಢೀಕರಣ | |
| 6 | ರೂ.ಮೌಲ್ಯಮಾಪನ–4 | ಮಹಾಶಿವರಾತ್ರಿ ಹಬ್ಬ | ಸ.ಸ. ಮೌಲ್ಯಮಾಪನ ಕ್ರೋಢೀಕರಣ | |
| 7 | ಭಾನುವಾರ | ಭಾನುವಾರ | ಯುಗಾದಿ ಹಬ್ಬ | |
| 8 | ಪುನರಾವರ್ತನೆ | ವಿಶ್ವಮಹಿಳಾ ದಿನಾಚರಣೆ | **ಸಮುದಾಯದತ್ತ ಶಾಲೆ(ಪ್ರಾಥಮಿಕ)** | |
| 9 | ಪುನರಾವರ್ತನೆ | ಪುನರಾವರ್ತನೆ | **ಸಮುದಾಯದತ್ತ ಶಾಲೆ(ಪ್ರೌಢ)** | |
| 10 | ಪುನರಾವರ್ತನೆ | ರಂಜಾನ್ | ಶಾಲಾ ಕರ್ತವ್ಯ ಕೊನೆ ದಿನ | |
| 11 | ಪುನರಾವರ್ತನೆ | ಪುನರಾವರ್ತನೆ | ಭಾನುವಾರ | |
| 12 | ಪುನರಾವರ್ತನೆ | ಪುನರಾವರ್ತನೆ | ಬೇಸಿಗೆ ರಜೆ | |
| 13 | ಪುನರಾವರ್ತನೆ | ಪುನರಾವರ್ತನೆ | ಬೇಸಿಗೆ ರಜೆ | |
| 14 | ಭಾನುವಾರ | ಭಾನುವಾರ | ಅಂಬೇಡ್ಕರ್ ಜಯಂತಿ | |
| 15 | ಪುನರಾವರ್ತನೆ | ಪುನರಾವರ್ತನೆ | ಬೇಸಿಗೆ ರಜೆ | |
| 16 | ಪುನರಾವರ್ತನೆ | ಪುನರಾವರ್ತನೆ | ಬೇಸಿಗೆ ರಜೆ | |
| 17 | ಪುನರಾವರ್ತನೆ | ಪುನರಾವರ್ತನೆ | ಬೇಸಿಗೆ ರಜೆ | |
| 18 | ಪುನರಾವರ್ತನೆ | ಪುನರಾವರ್ತನೆ | ಭಾನುವಾರ | |
| 19 | ವಾರ್ಷಿಕ ಪೂರ್ವಭಾವಿ ಪರೀಕ್ಷೆ | ಪುನರಾವರ್ತನೆ | ಬೇಸಿಗೆ ರಜೆ | |
| 20 | ವಾರ್ಷಿಕ ಪೂರ್ವಭಾವಿ ಪರೀಕ್ಷೆ | (1–9) SA-2 ನಿರ್ವಹಣೆ | ಬೇಸಿಗೆ ರಜೆ | |
| 21 | ಭಾನುವಾರ | ಭಾನುವಾರ | ಬೇಸಿಗೆ ರಜೆ | |
| 22 | ವಾರ್ಷಿಕ ಪೂರ್ವಭಾವಿ ಪರೀಕ್ಷೆ | ಹೋಳಿ | ಬೇಸಿಗೆ ರಜೆ | |
| 23 | ವಾರ್ಷಿಕ ಪೂರ್ವಭಾವಿ ಪರೀಕ್ಷೆ | (1–9) SA-2 ನಿರ್ವಹಣೆ | ಬೇಸಿಗೆ ರಜೆ | |
| 24 | ವಾರ್ಷಿಕ ಪೂರ್ವಭಾವಿ ಪರೀಕ್ಷೆ | (1–9) SA-2 ನಿರ್ವಹಣೆ | ಭಾನುವಾರ | |
| 25 | ವಾರ್ಷಿಕ ಪೂರ್ವಭಾವಿ ಪರೀಕ್ಷೆ | (1–9) SA-2 ನಿರ್ವಹಣೆ | ಬೇಸಿಗೆ ರಜೆ | |
| 26 | ಪುನರಾವರ್ತನೆ | (1–9) SA-2 ನಿರ್ವಹಣೆ | ಬೇಸಿಗೆ ರಜೆ | |
| 27 | ಪುನರಾವರ್ತನೆ | (1–9) SA-2 ನಿರ್ವಹಣೆ | ಬೇಸಿಗೆ ರಜೆ | |
| 28 | ಭಾನುವಾರ/ರಾಷ್ಟ್ರೀಯ ವಿಜ್ಞಾನ ದಿನ | ಭಾನುವಾರ | ಬೇಸಿಗೆ ರಜೆ | |
| 29 | | (1–9) SA-2 ನಿರ್ವಹಣೆ | ಬೇಸಿಗೆ ರಜೆ | **2028–29** |
| 30 | | (1–9) SA-2 ನಿರ್ವಹಣೆ | ಬೇಸಿಗೆ ರಜೆ | **ಸಾಲು** |
| 31 | | (1–9) SA-2 ನಿರ್ವಹಣೆ | | **ಪ್ರಾರಂಭ** |

**ಮುಖ್ಯಶಿಕ್ಷಕರ ಸಹಿ**